C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.129/2025 ಪಿ.ಡಬ್ಲ್ಯೂ-5 ಸಿ.ಡಬ್ಲ್ಯೂ-6

ದಿನಾಂಕಃ- 10.03.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ನಂಜುಂಡಸ್ವಾಮಿ |
| ತಂದೆಯ ಹೆಸರು | ನಂಜಯ್ಯ |
| ವಯಸ್ಸು | 49 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಬಾಚನಹಳ್ಳಿ ಗ್ರಾಮ, |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಚಾಸಾ-7 ನೇ ಮೋಹನ್ ಬಿನ್ ಮಹದೇವ ಮತ್ತು ಚಾಸಾ-8 ನೇ ಸುನಿಲ್ ಬಿನ್ ಮಲ್ಲಿಕಾರ್ಜುನ ರವರ ಪರಿಚಯ ಇದೆ.

2. ನಾನು PCC ಓದಿದ್ದೇನೆ.

3. ನನಗೆ ಆರೋಪಿ ಅಜಯನ ಪರಿಚಯ ಇದೆ.

4. ನನಗೆ ನಮ್ಮ ಊರಿನ ಶಿವಮಲ್ಲಪ್ಪ ಮತ್ತು ಶಿವಮಲ್ಲಪ್ಪನ ಹೆಂಡತಿ ಮತ್ತು ಮಕ್ಕಳ ಪರಿಚಯ ಇದೆ.

5. ಇವತ್ತಿಗೆ ಸಮಾರು 1 ವರುಷದ ಹಿಂದೆ ಶಿವಮಲ್ಲಪ್ಪ ಮೃತಪಟ್ಟಿದ್ದಾರೆ.

6. ಈ ಸಾಕ್ಷಿ ಕಡತದಲ್ಲಿ ಇರುವ 30.07.2025 ನೇ ದಿನಾಂಕದ ನೋಟೀಸು ಮತ್ತು ಶವ ತನಿಖೆ ಮಹಜರಿನ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ನೋಟೀಸು ಮತ್ತು ಶವ ತನಿಖೆ ಮಹಜರನ್ನು ನಿಪಿ.8 ಮತ್ತು 9 ಎಂದೂ ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 9(ಎ) ಎಂದು ಗುರುತಿಸಲಾಯಿತು.

7. ಈ ಸಾಕ್ಷಿ ನಿಪಿ-9 ರಲ್ಲಿ ಗುರುತಿಸಿರುವ ಶವ ತನಿಖೆ ಮಹಜರಿನ ಜೊತೆಯಲ್ಲಿ ಇರುವ 6 ಫೋಟೋಗಳಲ್ಲಿ ಶಿವಮಲ್ಲಪ್ಪನ ಶವ, ಶಿವಮಲ್ಲಪ್ಪನ ಮಗಳು ವನಿತಾ, ಪೊಲೀಸರು, ತಾನು, ಮೋಹನ ಬಿನ್ ಮಹದೇವಯ್ಯ, ಸುನಿಲ್ ಕುಮಾರ ಬಿನ್ ಮಲ್ಲಿಕಾರ್ಜುನ ಸ್ವಾಮಿ ಕಾಣಿಸುತ್ತಿರುವುದಾಗಿ ಹೇಳಿದ್ದಾರೆ.

8. ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಪೊಲೀಸರು ಶಿವಮಲ್ಲಪ್ಪನ ಶವ ತನಿಖೆ ಮಾಡಿ ಮಹಜರು ತಯಾರಿಸಿದಾಗ ನಿಪಿ-9(ಎ) ರಲ್ಲಿ ಗುರುತಿಸಿರುವ ಸಹಿ ಮಾಡಿದ್ದೇನೆ.

<u>ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ.ಎಂ.ಬಿ.ಬಸವರಾಜು ವಕೀಲರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

<u>ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.